**ದಲಿತರಲ್ಲಿ ಎಡ ಮತ್ತು ಬಲಗೈಗಳ ಸಾಂಸ್ಕೃತಿಕ ಸಂಘರ್ಷ**

ಹಿಂದೂ ಧರ್ಮದ ವರ್ಣಾಶ್ರ ಮದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ವರ್ಣಗಳೆಂಬ ಹೀನ ವ್ಯವಸ್ಥೆ ಶೂದ್ರ ರನ್ನು ಹೀನ ಜೀವನಪದ್ಧತಿಗೆ ನೂಕಲ್ಪಟ್ಟಿತು. ಇಂಥಹ ಹೀನ ವೃತ್ತಿ ಹಾಗೂ ಬದುಕಿಗೆ ಮೀಸಲಾದ ಇವರು ಅಸ್ಪೃಶ್ಯರೆಂಬ ಹಲವಾರು ಜಾತಿಗಳಲ್ಲಿ ತಂತಮ್ಮ ಜಾತಿಗಳ ಹುಟ್ಟುಗಳ ಬಗೆಗೆ ಮಾಹಿತಿಯನ್ನೊದಗಿಸುತ್ತಾರೆ. ಅವರು ನೀಡುವ ನೂರಾರು ದಂತಕತೆಗಳು ನಮ್ಮ ಜನಪದ ಸಾಹಿತ್ಯದಲ್ಲಿ ಸಾಮಗ್ರಿ ಗಳಾಗುತ್ತವೆ. ಆದರೆ ಅವುಗಳೆಲ್ಲವೂ ಸಹ ಆರಾಧನಾ ಸಂಸ್ಕೃತಿಯೊಂದಿಗೆ ಹೆಣೆದುಕೊಂಡಿದ್ದು ಪುರಾಣವಸ್ತುಗಳಾಗಿವೆಯೇ ಹೊರತು ನಿರ್ದಿಷ್ಟತೆ ಮತ್ತು ಸ್ಪಷ್ಟತೆಗಳಿಲ್ಲದ ಮೌಢ್ಯಪದ್ಧತಿಯಂತಿವೆ. ಅಸ್ಪೃಶ್ಯ ಜನರ ದುರ್ಬಲ ಮಾನಸಿಕಸ್ಥಿತಿಗಳು ಇಂತಹ ಪೌರಾಣಿಕ ಕಥೆಗಳಿಗೆ ಸ್ಥಾನವನ್ನು ನೀಡಿ ಮೇಲ್ವರ್ಗದ ಪಂಕ್ತಿಯ ಜನರಿಗಿಂತ ತಾವುಗಳು ಕನಿಷ್ಟರೆಂದು ಒಪ್ಪಿಕೊಂಡಿದ್ದಾರೆ. ಅದೇ ರೀತಿ ಬದುಕಿದ್ದಾರೆ.

ಇಂತಹ ವ್ಯವಸ್ಥೆಗಳನ್ನು ವೈಜ್ಞಾನಿಕ ಹಾಗೂ ವೈಚಾರಿಕ ದೃಷ್ಟಿಯಿಂದ ಚಿಂತನೆಗೊಳಪಡಿಸಿದಲ್ಲಿ ಅದನ್ನು ಅಲ್ಲಗಳೆಯಲು ಸಾಂಪ್ರ ದಾಯಿಕ ಸಮೂಹಗಳು ಪ್ರ ಬಲವಾಗಿವೆ. ಇಂತಹ ಸಂಸ್ಕೃತಿಯ ಆಚರಣೆ ಮತ್ತು ವ್ಯವಸ್ಥೆಯ ಕತ್ತಲೊಳಗೆ ಸತ್ಯದ ಬೆಳಕನ್ನು ಅರಸುತ್ತ ಹೊರಟಾಗ ಸಿಗುವುದು ಬರೀ ಕತ್ತಲೆಯೇ ಆಗಿರುತ್ತದೆ. ಮನುಶಾಸ್ತ್ರದ ನೀತಿಸಂಹಿತೆಗಳು ಬ್ರಾ ಹ್ಮಣೀಕರಣದ ಉಳಿವಿಗಾಗಿಯೆಂಬಂತೆ ಸಂಸ್ಕೃತಿಯ ಆಚರಣೆ, ಸಂಪ್ರ ದಾಯ, ಆರಾಧನೆಗಳಿಗೆ ವೇದಿಕೆಯನ್ನೊದಗಿಸುತ್ತೆಯೇ ಹೊರತು ತಳ ಸಮುದಾಯಗಳಿಗಲ್ಲ. ಎಡ್ಗರ್ ಥರ್ಸ್ಟನ್ cast & Tribes in southern India ದಲ್ಲಿಯೂ ಅನಂತಕೃಷ್ಣ ಅಯ್ಯರ್ ಹಾಗೂ ಎಚ್.ವಿ. ನಂಜುಂಡಯ್ಯನವರು ಮೈಸೂರು ಗೆಜೆಟಿಯರ್‌ನಲ್ಲಿಯೂ ಎಡ–ಬಲಗಳ ವಿವರಣೆಗಳನ್ನು ತಮ್ಮ ಸಂಶೋಧನಾ ಅಧ್ಯಯನಗಳ ಮೂಲಕ ಸ್ಪಷ್ಟವಾಗಿ ನೀಡುತ್ತಾ ಹೋಗುತ್ತಾರೆ. ಹಾಗೆಯೇ ಭೀಮಕವಿಯ ಬಸವಪುರಾಣ ಮತ್ತು ಚನ್ನಬಸವಣ್ಣನ ಬಸವ ಪುರಾಣಗಳಲ್ಲಿಯೂ ಸಹ ಎಡ–ಬಲ ಜಾತಿಗಳ ಪಟ್ಟಿಯೇ ಇದೆ. ಅವು ಈ ಎಡ–ಬಲಗಳ ಉತ್ಪತ್ತಿಯ ಮೂಲದ ಬಗ್ಗೆ ಸ್ಪಷ್ಟ ಮಾಹಿತಿಯನ್ನೊದಗಿಸಲಾರವು. ಅವುಗಳು ಕಂಚಿಪೀಠದಲ್ಲಿ ಕಾಳಿ ದೇವತೆಯ ಕೈಯಿಂದ ಎಡಬಲಗಳು ಸೃಷ್ಟಿಯಾದವೆಂಬ ಬರಿಯ ಪೌರಾಣಿಕ ಕಥೆಗಳನ್ನು ಮಾತ್ರ ಮಾಹಿತಿಯನ್ನೊದಗಿಸುವಲ್ಲಿ ಸಾಕ್ಷಿಯಾಗಿ ನಿಲ್ಲುತ್ತವೆ.

ಹೊಲೆಯ ಮತ್ತು ಮಾದಿಗ ಎಂಬೆರಡು ಜಾತಿಗಳು ದಲಿತ ಸಮುದಾಯಗಳಲ್ಲಿ ಬರುವ ಪ್ರ ಬಲವಾದ ಎರಡು ಜಾತಿಗಳು. ಇವೆರಡೂ ಅಸ್ಪೃಶ್ಯತೆಯ ಆಚರಣೆಯಡಿಯಲ್ಲಿ ನಲುಗಿ ಹೋಗಿರುವುದನ್ನು ಶತಶತಮಾನಗಳ ಪುಟಪುಟಗಳಲ್ಲಿಯೂ ಪ್ರ ತಿದಿನಗಳಲ್ಲಿಯೂ ತಿರುಗಿ ನೋಡಲು ಸಾಧ್ಯ. ಇಡೀ ಮೇಲ್ವರ್ಗಗಳು ಈ ಎರಡನ್ನು ಬಹಿಷ್ಕೃತರನ್ನಾಗಿ ಮಾಡಿ ಊರ ಹೊರಗೆ ಇವರ ಬದಕನ್ನು ದೂಡಿ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿರುವ ಪರಿಸ್ಥಿತಿ ಇಂದಿಗೂ ಚಾಲನೆಯಲ್ಲಿದೆ. ಗ್ರಾ ಮೀಣ ಪ್ರ ದೇಶಗಳಲ್ಲಿ ಅವರ ದಿನನಿತ್ಯದ ಜೀವನ ಸವರ್ಣೀಯರ ವ್ಯವಸ್ಥೆಗಳ ಮುಳ್ಳು ಬೇಲಿಯಲ್ಲಿ ಸಿಕ್ಕಿದ ಬಾಳು ಛಿದ್ರ ಗೊಳ್ಳುತ್ತಿದೆ. ಈ ನಡುವೆ ಎಡಗೈ ಬಲಗೈ ಎಂಬ ತಾರತಮ್ಯಗಳು ನೆಲೆಯೂರಿ ತಮ್ಮೊಳಗೇ ಭೇದ ಭಾವನೆಗಳು ಹೆಮ್ಮರವಾಗಿ ಒಬ್ಬರನ್ನೊಬ್ಬರು ಒಪ್ಪಿಕೊಳ್ಳದೆ, ಪ್ರ ತ್ಯೇಕಿಸಿಗೊಂಡು ದೂರವಾಗುತ್ತಿರುವುದು

ವಿಪರ್ಯಾಸ ಈ ಎಡಗೈ ಮತ್ತು ಬಲಗೈಗಳ ಪ್ರ ತ್ಯೇಕೀಕರಣವು ಕೇವಲ ಹೊಲೆಯ ಮತ್ತು ಮಾದಿಗ ಜಾತಿಗಳಲ್ಲಿ ಮಾತ್ರ ಕಂಡು ಬರುತ್ತದೆ.

ಆದರೆ ಪ್ರ ಸ್ತುತದಲ್ಲಿ ದಲಿತ ಸಂಸ್ಕೃತಿಯ ಪರಂಪರಾಗತವಾದ ಹೊಲೆಯ ಮತ್ತು ಮಾದಿಗರ ವಿಂಗಡಣೆಯ ಬಲಗೈ ಮತ್ತು ಎಡಗೈ ವರ್ಗೀಕರಣವು ಎರಡು ಪ್ರ ಬಲ ಗುಂಪುಗಳಾಗಿ ಇಡೀ ಸಮಾಜದಲ್ಲಿ ಪ್ರ ತಿಷ್ಠೆಯ ಪದವಾಗಿ ನಾ ಮೇಲು, ನೀ ಕೀಳು ಎಂದೆಂಬಂತೆ ಸಾಂಸ್ಕೃತಿಕ ಸಂಘರ್ಷದಿಂದಾಗಿ ಎಡ–ಬಲಗಳೆಂಬ ಅಂತರ್ಯುದ್ಧವೇ ಘಟಿಸಬಹುದಾದ ಸೂಚನೆಗಳು ಸ್ಪಷ್ಟವಾಗುತ್ತಿವೆ.

ದಲಿತ ಸಮುದಾಯಗಳಲ್ಲಿ ಇಂತಹ ಎಡ–ಬಲಗಳ ಹುಟ್ಟುಹಾಕುವಿಕೆಯಲ್ಲಿ ಹಾಗೂ ಜಾರೀ ಕಾರ್ಯಗಳಲ್ಲಿ ಪಣಕಟ್ಟುಗಳು ಪ್ರ ಧನವಾಗಿ ನಿಲ್ಲುತ್ತವೆ. "ಪಣ ಎಂದರೇನು? ಪಣ ಸಮಾಜದ ವಿಂಗಡಣೆಯ ಸ್ವರೂಪವೇನು? ಪಣವನ್ನು ಮತ್ತು ಆ ಸಮಾಜದ ಪರಿಕಲ್ಪನೆಯನ್ನು ಹುಟ್ಟು ಹಾಕಿದವರಾರು? ಪಣಕಟ್ಟಿಗೂ ಮತ್ತು ಎಡಗೈ ಬಲಗೈಗಳಿಗೂ ನಡುವಿನ ಸಂಬಂಧ ಎಂತಹುದು? ಈ ಪಣಕಟ್ಟಿನ ಈ ಎರಡು ಗುಂಪುಗಳಿಗೆ ಜಾತಿಗಳನ್ನು ಸೇರಿಸುವಾಗ ಅನ್ವಯಿಸಿದ ಮಾನದಂಡವೆಂತಹುದು? ದುರಂತವೆಂದರೆ ಈ ಎಲ್ಲಾ ವಿವರಗಳೂ ಮತ್ತು ಪದಭಿನ್ನತೆಗಳು ಕಾಲದ ಕತ್ತಲೆಯಲ್ಲಿ ಹುದುಗಿಹೋಗಿವೆ".[1] ಈ ವ್ಯವಸ್ಥೆಯು ಈ ದೇಶದಲ್ಲಿ ಅಸ್ಪೃಶ್ಯ ಸಮುದಾಯಗಳಲ್ಲಿ ಪ್ರಾ ಚೀನದಿಂದಲೂ ಅಸ್ಥಿತ್ವದಲ್ಲಿತ್ತೇ ಅಥವಾ ಯಾವುದೋ ಒಂದು ಕಾಲಘಟ್ಟದಲ್ಲಿ ಮೈದಳೆದುದೋ ನಿರ್ದಿಷ್ಟವಾಗಿ ಹೇಳಲಾಗದು.

ಆದರೆ ಆದಿಮ ಮತ್ತು ಬುಡಕಟ್ಟು ಸಂಸ್ಕೃತಿಯ ಪ್ರ ತಿನಿಧಿಗಳಾದ ಈ ದ್ರಾ ವಿಡ ಜಾತಿಗಳು ತಮ್ಮ ಸಂಸ್ಕೃತಿಯುದ್ಧಕ್ಕೂ ಅವತರಿಸಿದ ಅನೇಕ ಪುರಾಣ ಮತ್ತು ಜಾನಪದ ಸೊಗಡಿನ ಪಾರಂಪರಿಕ ಮೌಲ್ಯಗಳನ್ನು ತಮ್ಮ ಬದುಕಿನುದ್ದಕ್ಕೂ ಉಳಿಸಿಕೊಂಡೇ ಬಂದವರಾಗಿದ್ದಾರೆ. "ಒಂದು ಕಾಲಕ್ಕೆ ಬ್ರಾ ಹ್ಮಣರಾದಿಯಾಗಿ ಒಟ್ಟು ಸಮಾಜವೇ ಗೋಮಾಂಸ ಭಕ್ಷಣೆಯನ್ನು ಸಹಜ ಆಹಾರ ರೂಢಿಯನ್ನಾಗಿ ಹೊಂದಿದ್ದು ಕಾರ್ಯಕ್ರ ಮದಲ್ಲಿ ಕೈಬಿಟ್ಟು 'ಪವಿತ್ರ ' ಗೊಂಡದ್ದು ಈಗಾಗಲೇ ನಿರೂಪಿತವಾಗಿದೆ. ಸಮಾಜದ ತಳಸಮುದಾಯ ಉಳಿದವರಂತೆ ಆ ರೂಢಿಯನ್ನು ತ್ಯಜಿಸುವುದರ ಮೂಲಕ ಪವಿತ್ರ ಆಗಿಬಿಡುವ ನಾಜೂಕು ತೋರದೆ ತನ್ನ ಹಳೆಯ ರೂಢಿಗೆ ಜೋತು ಬಿದ್ದುದರಿಂದ ಈಗಲೂ ಉಳಿದವರ ಕಣ್ಣುಗಳಲ್ಲಿ ಘೋರ ಪಾಪಿಗಳಂತೆ ಪರಿಗಣಿಸಲ್ಪಟ್ಟು ಅತ್ಯಂತ ನಿಕೃಷ್ಟ ಸ್ಥಾನ ಮಾನಗಳನ್ನು ಒಪ್ಪಿಕೊಂಡಿದ್ದಾರೆ. ಈ ಎಡಗೈ–ಬಲಗೈ ಗುಂಪುಗಾರಿಕೆಯದೂ ಇದೇ ಕಥೆ "[2] ಎನ್ನುತ್ತಾರೆ.

ಎಡ್ಗರ್ ಥರ್ಸ್ಟನ್‌ನು ತನ್ನ 'ದಕ್ಷಿಣಭಾರತದ ಜಾತಿಗಳು ಮತ್ತು ಬುಡಕಟ್ಟುಗಳು' ಎಂಬ ಕೃತಿಯಲ್ಲಿ ತಾನು ನಾಡಿನೊಳಗೆಲ್ಲಾ ಸಂಚರಿಸಿ ಕಲೆಹಾಕಿದ ಮಾಹಿತಿಗಳಲ್ಲಿ ಎಡಗೈ ಬಲಗೈಗಳ ಹುಟ್ಟುಗಳ ಬಗೆಗೆ ಜನರಲ್ಲಿ ಅಡಗಿರಬಹುದಾದ ಪೌರಾಣಿಕ ಅಂಶಗಳನ್ನು ದಾಖಲಿಸುತ್ತಾರೆ. ಅದರ ಪ್ರ ಕಾರ. "ಜಾಂಬವ ಋಷಿಯು ದೇವ ಸಭೆಗೆ ಯಾವಾಗಲೂ ತಡವಾಗಿ ಬರುತ್ತಿರುತ್ತಾನೆ. ಇದನ್ನು ಗಮನಿಸಿದ ಶಿವನು 'ತಾವು ದೇವಸಭೆಗೆ ಯಾಕೆ ತಡವಾಗಿ ಬರುತ್ತಿದ್ದೀರಿ' ಎಂಬುದಾಗಿ ಪ್ರ ಶ್ನಿಸುತ್ತಾನೆ. ಅದಕ್ಕೆ ಆತನು 'ತಾನು ಪ್ರ ತಿದಿನವೂ ತನ್ನ ಮಕ್ಕಳಿಗೆ ಬೇಕಾದ ಅಗತ್ಯಗಳನ್ನೆಲ್ಲಾ ಪೂರೈಸಿಯೇ ಬರಬೇಕಾಗಿದೆ. ಅದಕ್ಕಾಗಿ ತಡವಾಗುತ್ತಿದೆ ಎಂದು ಹೇಳುತ್ತಾನೆ. ಇದರಿಂದ ಜಾಂಬುಋಷಿ ಮತ್ತು ಅವನ ಮಕ್ಕಳ ಬಗ್ಗೆ

ಕರುಣೆಯುಂಟಾಗಿ ಶಿವನು ಋಷಿಗೆ ಒಂದು ಕಾಮಧೇನುವನ್ನು ದಯಪಾಲಿಸುತ್ತಾನೆ. ಆ ಮಕ್ಕಳ ಪ್ರ ತಿನಿತ್ಯದ ಅಗತ್ಯಗಳನ್ನು ಅದೇ ನಿರ್ವಹಿಸಿರುತ್ತದೆ. ಒಮ್ಮೆ ಜಾಂಬವ ಋಷಿಗಳು ಶಿವನ ಆಸ್ಥಾನದಲ್ಲಿದ್ದಾಗ 'ಸಾಂಖ್ಯ' ಋಷಿಯು ಜಾಂಬವನ ಆಶ್ರ ಮಕ್ಕೆ ಭೇಟಿನೀಡುತ್ತಾನೆ. ಅವನನ್ನು ಜಾಂಬವರ ಪುತ್ರ ನಾದ ಯುಗಮುನಿಯು ಪ್ರೀತಿಯಿಂದ ಸತ್ಕರಿಸುತ್ತಾನೆ. ಅವನ ಸತ್ಕಾರದ ಭೋಜನದಲ್ಲಿ ಕಾಮಧೇನು ದಯಪಾಲಿಸಿದ ರುಚಿಕರ ಹಾಲಿನಕೆನೆಯಿಂದ ಪ್ರೇರೇಪಿತನಾಗಿ ಆ ಕಾಮಧೇನುವಿನ ಮಾಂಸದ ಭಕ್ಷಣೆಯ ರುಚಿಯನ್ನು ಸವಿಯಬೇಕೆನ್ನುವ ಬಯಕೆಯುಂಟಾಗುತ್ತದೆ. ಅದರಂತೆ ಯುಗಮುನಿಯನ್ನು ಕರೆದು ಕಾಮಧೇನುವನ್ನು ಕೊಲ್ಲಬೇಕೆಂದು ಪ್ರೇರೇಪಿಸುತ್ತಾನೆ. ಆತ ನಿರಾಕರಿಸುತ್ತಾನೆ. ನಂತರ ಸಾಂಖ್ಯನೇ ಕಾಮಧೇನುವನ್ನು ಕೊಂದು ಅದರ ಮಾಂಸವನ್ನು ತನ್ನೊಡನೆ ಸೇವಿಸಬೇಕೆಂಬ ಒತ್ತಾಯಕ್ಕೆ ಮಣಿದು ಸೇವಿಸುತ್ತಾನೆ. ಶಿವನ ಆಸ್ಥಾನದಿಮದ ಜಾಂಬವರು ಮರಳಿ ಬಂದಾಗ ಆಶ್ರ ಮವಾಸಿಗಳು ಗೋಮಾಂಸ ಭಕ್ಷಣೆಯಲ್ಲಿ ತೊಡಗಿರುವುದನ್ನು ಕಂಡು ಅವರ ಮೇಲೆ ಕ್ರ ಮ ಕೈಗೊಳ್ಳುಂತೆ ಶಿವನ ಬಳಿಗೆ ಕರೆದೊಯ್ಯತ್ತಾರೆ. ಆಸ್ಥಾನವನ್ನು ಪ್ರ ವೇಶಿಸಲು ಹೆದರಿದ ಅವರಿಬ್ಬರೂ ದ್ವಾರದ ಎಡಭಾಗದಲ್ಲಿ ಯುಗಮುನಿಯೂ ಬಲಭಾಗದಲ್ಲಿ ಸಾಂಖ್ಯನೂ ನಿಲ್ಲುತ್ತಾರೆ. ಶಿವನು ಅವರನ್ನು ಚಂಡಾಲರಾಗಿರೆಂದು ಶಪಿಸುತ್ತಾನೆ. ಬಲಪಾರ್ಶ್ವದಲ್ಲಿ ನಿಂತಿದ್ದ ಸಾಂಖ್ಯರ ವಂಶಜರು ಬಲಗೈ ಜಾತಿಯ ಹೊಲೆಯರಾಗುತ್ತಾರೆ. ಎಡ ಪಾರ್ಶ್ವದಲ್ಲಿ ನಿಂತ ಯುಗಮುನಿಯ ವಂಶಜರು ಎಡಗೈ ಜಾತಿಯ ಮಾದಿಗರಾಗುತ್ತಾರೆಂಬ"[3] ಪೌರಾಣಿಕ ಹಿನ್ನೆಲೆಯನ್ನು ಥರ್ಸ್ಟನ್ ಒದಗಿಸುತ್ತಾನೆ. ಮತ್ತೊಂದು ಪೌರಾಣಿಕಾ ನಂಬಿಕೆಗಳ ಪ್ರ ಕಾರ "ಪಾರ್ವತಿಯ ಸೂತಕದ ಬಟ್ಟೆಯಲ್ಲಿ ಹುಟ್ಟಿದ ಹೊಲೆಯ ಮಗು ಪ್ರ ತಿದಿನ ಮೇಯಿಸಿಕೊಂಡು ಬಂದು ಕೈಲಾಸದ ಮನೆಯಲ್ಲಿ ಕಟ್ಟಿಹಾಕುತ್ತಿತ್ತು. ಪಾರ್ವತಿಯು ಬಿಂದಿಗೆಯನ್ನು ತೆಗೆದುಕೊಂಡು ಹಾಲನ್ನು ಕರೆಯುತ್ತಿದ್ದಳು. ಕಾಮಧೇನುವಿನ ಗಟ್ಟಿಹಾಲನ್ನು ತಂದು ಕಾಯಿಸಿ ಶಿವ–ಪಾರ್ವತಿಯರು ಕುಡಿಯುತ್ತಾರೆ. ಮಿಕ್ಕಿದ ಕೆನೆಯ ನೀರನ್ನು ಕೆರೆದು ಗೂಡಲ್ಲಿ ಇಟ್ಟಿರುತ್ತಾಳೆ. ಈ ಹೊಲೆಯ ಹುಡುಗ ಅದನ್ನು ನೋಡಿ, ಪಾರ್ವತಿಯು ಮರೆಯಾದೊಡನೆ ಅದನ್ನು ಕದ್ದು ತಿಂದು ಬಿಡುತ್ತದೆ. ಹಾಲಿನ ಕೆನೆಯ ರುಚಿ ನಾಲಿಗೆಗೆ ಸೋಕಿದೊಡನೆಯೇ ಈ ಕೆನೆಯೇ ಇಷ್ಟೊಂದು ರುಚಿಯಿರಬೇಕಾದರೆ ಅದನ್ನು ಕೊಡುವ ಕಾಮಧೇನುವು ಎಷ್ಟು ರುಚಿಯಿರಬಹುದು ಎಂದು ಬಗೆದು ಅದರ ಮಾಂಸವನ್ನು ತಿನ್ನಲು ಯೋಚಿಸುತ್ತಾನೆ. ಅದನ್ನು ಮೇಯಿಸಲು ಹೋದವನು ಬೆಟ್ಟದ ಮೇಲೆ ಮಲಗಿಕೊಂಡು ತಾನು ಅದರ ಮಾಂಸವನ್ನು ತಿನ್ನಬೇಕಾದರೆ ಹೇಗೆ ಅದರ ಪ್ರಾ ಣವನ್ನು ತೆಗೆಯಬೇಕೆಂದು ಚಿಂತಿಸಿದವನು, ಒಂದು ಕಲ್ಲನ್ನು ತೆಗೆದುಕೊಂಡು ಅದರ ಅಳ್ಳೆಪರಿಗೆ ಹೊಡೆಯುತ್ತಾನೆ. ಅದು ಅರಚಿಕೊಂಡು ಪ್ರಾ ಣ ಬಿಡುತ್ತದೆ.

ಈ ಹೊಲಮಗನು ಓಡೋಡಿ ಬಂದು ಶಿವನ ಮುಂದೆ ನಿಲ್ಲುತ್ತಾನೆ. ಕೂಡಲೆ ಶಿವನ ದಿವ್ಯಾದೃಷ್ಟಿಗೆ ಅವನ ಆಸೆಯೆಲ್ಲಾ ಅರಿವಾಗುತ್ತದೆ. ಶಿವನು 'ಅಪ್ಪಾ ಆಯ್ತು ನಿನ್ನಾಸೆ ಎಷ್ಟುಮಟ್ಟಿಗಿದೆ ಅಷ್ಟೂ ತೀರಿಸಿಕೋ ಹೋಗು' ಎನ್ನುತ್ತಾನೆ. ಅದಕ್ಕೆ ಹೊಲಮಗನು 'ತಂದೆಯೆಂದರೆ ಆಸೆಯನ್ನು ತೀರಿಸಿಕೋ ಅಂತೀರಲ್ಲ ಅದನ್ನು ಕುಯ್ಯಲು ಸರಿಯಾದ ಆಯುಧಗಳೇ ನನ್ನಲಿಲ್ಲ. ತಿನ್ನುವ ಕೆಲಸ ನನ್ನಿಂದಾಗದು ನನಗೆ ಸಹಾಯ ಮಾರ್ಗ ತೋರಿ ಎನ್ನುವನು. ಹೊಲಮಗನ ಮಾತನ್ನು ಕೇಳಿದ ಶಿವನ ಕಂಕುಳಲ್ಲಿ ಜಳಜಳನೆ ಮದದ ಬೆವರು ಹರಿಯಿತು. ಅದನ್ನವನು ಕೆಳಗೆ ಎಸೆಯುತ್ತಾನೆ. ಆ ಬೆವರಲ್ಲಿ ಮಾಯದ ಹುಡುಗ ಎದ್ದು ನಿಲ್ಲುತ್ತಾನೆ. ಕೈಯಲ್ಲಿ ಕತ್ತಿ ಕಠಾರಿಯನ್ನು ಹಿಡಿದುಕೊಂಡು ಗುಡುಗುಡನೆ ಸದ್ದುಮಾಡಿಕೊಂಡು ಕೇಕೆ ಹಾಕಿ ಕೂಗಿಕೊಂಡು ಮೇಲಕ್ಕೇಳುತ್ತಾನೆ. ಇವರ ಅಬ್ಬರ ಆರ್ಭಟಕ್ಕೆ ಹೊಲಮಗನ ಗುಂಡಿಗೆ

ಸೀಳಿದಂತಾಗಿ ಹೆದರಿ ಓಡಿಹೋಗುತ್ತಾನೆ. ಹೀಗೆ ಓಡುತ್ತಿದ್ದ ಹೊಲಮಗನನ್ನು ಶಿವನು ಓಡಿಬಂದು ಬಲಗೈಯಲ್ಲಿ ಹಿಡಿದು ಕೊಂಡನಂತೆ. ಬೆವರಿನಲ್ಲಿ ಹುಟ್ಟಿದವನನ್ನು ಎಡಗೈಯಲ್ಲಿ ಹಿಡಿದುಕೊಂಡನಂತೆ.

ಶಿವನು ಎಡಗೈಯಲ್ಲಿ ಹಿಡಿದವನನ್ನು ಕರೆದು 'ಅಪ್ಪಾ ನನ್ನ ಮದದ ಬೆವರಿನಲ್ಲಿ ಹುಟ್ಟಿದವನೆ ಈ ಹೊಲಮಗ ಕಾಮಧೇನುವಿನ ಮಾಂಸವನ್ನು ತಿನ್ನಲು ಬಯಸಿದ್ದಾನೆ. ಅವನಿಗೆ ಕೊಂದು ಕೊಟ್ಟುಬಾ' ಎನ್ನುತ್ತಾನೆ. ಅದರ ಪ್ರ ಕಾರ ಎಡಗೈಯವನು ಕೊಂದು ಕೊಡುತ್ತಿದ್ದರೆ ಬಲಗೈಯವನು ತಿನ್ನುತ್ತಾನೆ. ಎಡಗೈಯವನು ಕಾಮಧೇನುವಿನ ಚರ್ಮವನ್ನು ಹೊತ್ತುಕೊಂಡು ಶಿವನ ಬಳಿ ಬಂದಾಗ ಅವರನ್ನು ನೋಡಿದ ಶಿವನು 'ಮಕ್ಕಳೆ, ನೀವಿಬ್ಬರೂ ಕೈಲಾಸದಲ್ಲಿರಲಾಗದು, ನೀವಿಬ್ಬರೂ ಭೂಲೋಕಕ್ಕೆ ಹೋಗಿ ಅಣ್ಣ ತಮ್ಮಂದಿರಾಗಿ ಜೀವನ ಮಾಡಿರಿ, ಕಾಮಧೇನುವಿನ ಮಾಂಸವನ್ನು ತಿಂದ ಹೊಲಮಗ ದುಡಿಮೆ ದುಡಿದು ಲೆಕ್ಕ ತೀರಿಸಲಿ, ಕೋಡು, ಚರ್ಮ, ಕೊಳಬು, ಮೂಳೆ ಮುಂತಾದ ಲೆಕ್ಕಗಳನ್ನು ನೀನು ತೀರಿಸು. ಚರ್ಮದಿಂದ ಬಾರುಕೋಲು, ಸಿದ್ದುಗೆ, ತತ್ತಿಮಾಡು. ಕೊಂಬು ತೆಗೆದುಕೊಂಡು ಎರಂಡೆ ಮಾಡು. ಕಣ್ಣಿಗೆ ಬದಲಾಗಿ ಕಣ್ಣು ಕೊಟ್ಟಂತೆ ಜನರಿಗೆ ಪಾದರಕ್ಷೆಯ ಮಾಡು' ಎಂದು ಹೇಳುತ್ತಾರೆ. ಶಿವನ ಮಾತನ್ನು ಕೇಳಿದ ಮಕ್ಕಳು ದುಃಖಿತರಾಗುತ್ತಾರೆ. ಎಡಗೈಯವನು ಶಿವನನ್ನು ಕುರಿತು 'ನಿನ್ನಾದೇಶಪಾಲಿಸಲು ಕಾಮಧೇನುವನ್ನು ಕೊಯ್ದು ಕೊರೆದು ಕೊಟ್ಟಿರುವೆ ನನ್ನದೇನು ತಪ್ಪು' ಎನ್ನಲು ಶಿವನು 'ನೀನು ಕೊಯ್ದ ಪಾಪದ ಪರಿಹಾರಕ್ಕಾಗಿ ಪಾರಕ್ಷೆಯನ್ನು ಹೊಲಿದುಕೊಂಡು ಪಾಪಕಳೆ' ಎನ್ನುತ್ತಾನೆ".[4] ಈ ಕಾರಣದಿಂದಾಗಿ ಹೊಲೆಯ ಮತ್ತು ಮಾದಿಗರು ಭೂಮಿಯಲ್ಲಿ ಜನಿಸಿದ್ದಾರೆ.

ಈ ಬೃಹತ್ ಪುರಾಣ ಕತೆಗಳ ಪ್ರ ಕಾರ, "ಹೊಲೆಯನು ಪಾರ್ವತಿಯ ಮಗನಾದರೆ, ಮಾದಿಗನು ಶಿವನ ಮಗನಾಗುತ್ತಾನೆ. ಇವರಿಬ್ಬರೂ ಶಿವಪಾರ್ವತಿಯರ ವಂಶದವರೆಂದು ಅರಿಯಲು ಸಾಧ್ಯವಿದೆ. ಮತ್ತೊಂದು ಪೌರಾಣಿಕ ನಂಬಿಕೆಯ ಪ್ರ ಕಾರ ಕಂಚಿಯ ಕಾಮಾಕ್ಷಿಯ ಪ್ರಾ ಚೀನ ಕಾಲದಲ್ಲಿ ಕಾಳಿ ಎಂಬ ಹೆಸರಿನ ಶಕ್ತಿದೇವತೆಯಾಗಿದ್ದಳು. ಕೆಳವರ್ಗದವರ ಆರಾಧ್ಯ ದೈವವೂ ಕೂಡ ಆಗಿದ್ದಳು. ಈ ಕಾಳಿಯೂ ತನ್ನ ಬಲಗೈಯಲ್ಲಿ ಕೆಲವು ಜಾತಿಗಳನ್ನು ಎಡಗೈಯಲ್ಲಿ ಕೆಲವು ಜಾತಿಗಳನ್ನು ಇಟ್ಟುಕೊಂಡಿದ್ದರಿಂದ ಅವುಗಳೇ ಎಡಗೈ ಮತ್ತು ಬಲಗೈ ಜಾತಿಗಳಾಗಿವೆಂಬುದಾಗಿ ಜನರು ನಂಬಿದ್ದಾರೆ"[5] ಎಂದು ದಾಖಲಿಸುತ್ತಾರೆ.

"ಎಡ–ಬಲಗಳೆಂಬ ಜಾತಿ ಭಿನ್ನತೆಗಳು, ಸಂಘರ್ಷಗಳು ಮೇಲ್ವರ್ಗದ ಜಾತಿಗಳಲ್ಲಿ ನಡೆದಿರುವಂತೆ ಕಂಡು ಬರುವುದಿಲ್ಲ. ಕುಶಲಕರ್ಮಿಗಳು, ಕೃಷಿಕರು ಮತ್ತು ವ್ಯಾಪಾರಿಗಳ ನಡುವೆ ನಡೆದಿರುವುದನ್ನು ಕಾಣಲು ಸಾಧ್ಯ. ಈ ಕಾರಣದಿಂದಾಗಿ ಪಣಕಟ್ಟು ಎಂಬುದು ಸಮಾಜದ ಕೆಲಸಗಳನ್ನು ನಿರ್ವಹಿಸಲು ವಿಂಗಡಣೆಯಾದ ವರ್ಗಗಳಾಗಿರುವುದರಿಂದ ಎಡ–ಬಲ ಎಂಬುದನ್ನು ಪ್ರ ಸ್ತುತವಾಗಿ ಹೀಗೇ ಎಂದು ನಿರ್ಧರಿಸುವುದು ಸರಳವಾದುದೇನೂ ಅಲ್ಲ"[6] ಎಂದು ಅಬೇ ದುಬೇಯವರು ಅಭಿಪ್ರಾ ಯ ಪಡುತ್ತಾರೆ. ಮತ್ತು ಮೇಲಿನ "ಈ ಮೂರು ವೃತ್ತಿಗಳ ವರ್ಗಗಳ ವಿಭಿನ್ನ ಪಣದ ಗುಂಪುಗಳ ಜಾತಿಗಳಿಗೆ ನೀಡಲ್ಪಟ್ಟ ಆಚರಣೆಗಳಾದ ಕುದುರೆಸವಾರಿ, ಚಪ್ಪಲಿ ಧರಿಸುವುದು, ಪಲ್ಲಕ್ಕಿ ಮತ್ತು ಮೇನೆಗಳಲ್ಲಿ ಹೋಗುವ, ವಿವಾಹ ಸಂದರ್ಭಗಳಲ್ಲಿ ಉಂಟಾದ ವಿವಾದಗಳು, ಮೆರವಣಿಗೆ, ಕಹಳೆ, ವಾದ್ಯ, ಧ್ವಜ, ಬಣ್ಣಗಳು, ಚಿಹ್ನೆಗಳನ್ನು ಹೊತ್ತೊಯ್ಯುವ ವಿಚಾರವಾಗಿ ಮನಸ್ತಾಪಗಳೂ ಘರ್ಷಣೆಗೆ ಕಾರಣವಾಗುತ್ತಿದ್ದವು"[7] ಎನ್ನುತ್ತಾರೆ.

ಸಿಂದ್ ಮಾದಿಗರ ಜನಪದ ಸಾಹಿತ್ಯದಲ್ಲಿ ಎಡಗೈ ಮತ್ತು ಬಲಗೈಗೆ ಸಂಬಂಧಿಸಿದಂತಹ ಪಣಕಟ್ಟುಗಳ ಬಗೆಗೆ ಅಪಾರ ಭಂಡಾರವಿದೆ. ಒಂಭತ್ತು ಪಣಕಟ್ಟಿನ ಕುಲಾಚಾರಗಳಿಗೆ ಸಂಬಂಧಿಸಿದ ಶಾಸನವನ್ನು ಆರಂಜ್ಯೋತಿ ಕತ್ತರಿಸಿ ಕಂಚಿಯಲ್ಲಿ ಬಿಟ್ಟು ಹೋಗಿರುವುದಾಗಿ ಸಿಂದ್ ಮಾದಿಗರು ನಂಬಿದ್ದಾರೆ. ಆರಂಜ್ಯೋತಿ ಕಲ್ಯಾಣದಲ್ಲಿ ವಿಶ್ವಕರ್ಮರು ನಮ್ಮ ಗುರುಗಳೆಂಬ ಪ್ರ ಸ್ತಾಪದ ಜೊತೆಗೆ ಒಂಬತ್ತು ಪಣಕಟ್ಟಿನ ಜಾತಿಗಳು ಅರುಂಧತಿ ವಸಿಷ್ಟರ ಮದುವೆಗೆ ಬಾಧ್ಯವಾಗಿವೆ. ಆ ಪ್ರ ಕಾರ "ಕುಲದ ಸ್ಥಾನಮಾನಗಳಿಗೆ ಧಕ್ಕೆಯಾಗುವಂತೆ ಎಲ್ಲ ಸವಲತ್ತುಗಳನ್ನೂ ಶಾಸನರೂಪದಲ್ಲಿ ಕೆತ್ತಿಸಿ ಕಂಚಿಯ ಕೊಳದಲ್ಲಿ ಮುಳುಗಿಸಿಟ್ಟಿದ್ದಾಳೆ. ಅಲ್ಲಿನ ಕೊವೇರಿಯಲ್ಲಿರುವ ಈ ಕೊಳದಲ್ಲಿ ಆ ಶಾಸನದ ಪಡಿಯಚ್ಚನ್ನು ಪಡೆಯಲು 'ಜಲಸ್ತಂಭನ' ವಿದ್ಯೆಯಿಂದ ಬೆನ್ನಿಗೆ ಮೇಣ ಮೆತ್ತಿಕೊಂಡು ಅಂಗಾತಮಲಗಿ ಪಡೆಯಬಹುದೆಂಬ ನಂಬಿಕೆಯಿದೆ. ಈ ಕಂಚಿಯ ಫರ್ಮಾನು 'ಎಡಗೈ, 'ಬಲಗೈ' ಗುಂಪುಗಳ ನಡುವೆ ತೀವ್ರ ಸಂಘರ್ಷದಂತಿದ್ದು, ಕಂಚು, ಕಾಗದಗಳಿಂದ ಅದನ್ನು ಪ್ರ ತಿಮಾಡಿಸಿ ಅಗತ್ಯಬಿದ್ದಾಗ ಅದನ್ನು ಹಾಜರುಪಡಿಸಿ ಕುಲದ ಗೌರವವನ್ನು ಎತ್ತಿ ಹಿಡಿಯುತ್ತಿದ್ದರು".[8] ಇಂತಹ ದಾಖಲೆಗಳಿರುವವರು ಅದನ್ನು ತಮ್ಮ ಮನೆಗಳಲ್ಲಿ ಭದ್ರ ವಾಗಿ ಕಾಪಾಡಿಕೊಂಡಿರುವರು. ಕಂಚಿನ ತಗಡಿನ ಮೇಲೆ ರಚಿತವಾದ ದಾಖಲೆಗಳು ಕೆಲವರ ದುಶ್ಚಟಗಳಿಗೆ ನಾಶವಾಗಿರಬಹುದು.

ಇಂತಹ ದಾಖಲೆಗಳಲ್ಲಿ ರಚಿತವಾದ, ಪ್ರ ತಿಜಾತಿಗೆ ಸಲ್ಲಬೇಕಾದಂತಹ ಸ್ಥಾನಮಾನಗಳು, ಗೌರವಗಳು, ಗುರುತು, ಲಾಂಛನಗಳು, ಕಂಚಿಯಲ್ಲಿವೆಯೆಂದು ಮಾದಿಗರಲ್ಲಿ ದೃಢವಾದ ನಂಬಿಕೆಯಿದೆ. ಹೊಲೆಯ ಮತ್ತು ಮಾದಿಗೆ ಮದುವೆ ಸಂದರ್ಭದಲ್ಲಿ ಉಂಟಾದ ಆಚರಣೆಗಳು ಸ್ಥಾನಮಾನ, ಗೌರವಗಳ ಬಗ್ಗೆ ಮೈಸೂರು ಸೀಮೆಯಲ್ಲಿ ನಡೆದ ಗಲಭೆಗೆ ಕಂಚಿಯಲ್ಲಿ ಲಭ್ಯವಿರುವ ಕಂಚಿನ ಸನ್ನದಿನಲ್ಲಿ ದಾಖಲಾದ ವಿವರಗಳ ಆಧಾರದಿಂದ ಬಗೆಹರಿದಿರುವುದನ್ನು ಗಮನಿಸುವುದು ಸೂಕ್ತವಾಗಿದೆ.

ಈ ಸನ್ನದಿಯಲ್ಲಿ ದಾಖಲಾಗಿರುವಂತೆ ಎಡಗೈ ಮತ್ತು ಬಲಗೈಗಳಿಗೆ ಸಂಬಂಧಿಸಿದಂತಹ ಪಣಕಟ್ಟುಗಳನ್ನು ಈ ರೀತಿಯಾಗಿ ಸಂಗ್ರ ಹಿಸಿ ನೀಡಲಾಗಿದೆ. ಎಡಗೈ ಗುಂಪಿನ ಕೊನೆಯಲ್ಲಿರುವ ಮಾದಿಗ ಮತ್ತು ಬಲಗೈ ಗುಂಪಿನ ಕೊನೆಯಲ್ಲಿರುವ ಹೊಲೆಯರನ್ನು ಬಿಟ್ಟರೆ ಉಳಿದ ಯಾವ ಜಾತಿಯಲ್ಲಿ ಎಡಗೈ ಬಲಗೈಗಳಾಗಿ ಉಳಿವಿಲ್ಲ. ಅವೆಲ್ಲ ಹಿಂದುಳಿದ ಸ್ಪೃಶ್ಯ ಜಾತಿಗಳೇ ಆಗಿವೆ.

| ಎಡಗೈ ಗುಂಪಿನಲ್ಲಿ | ಬಲಗೈ ಗುಂಪಿನಲ್ಲಿ |
|---|---|
| 1. ಪಾಂಚಾಲರು | 1. ಬಣಜಿಗ |
| 2. ಕಂಚುಗಾರ | 2. ಒಕ್ಕಲಿಗ |
| 3. ಕಮ್ಮಾರ | 3. ಗಾಣಿಗ |
| 4. ಕಲ್ಕುಟಿಗ | 4. ರಂಗಾರೆ |
| 5. ಅಕ್ಕಸಾಲಿಗ | 5. ಲಾಡ |
| 2. ಭೇರಿ | 6. ಗುಜರಾತಿ |
| 3. ದೇವಾಂಗ | 7. ಕಾಮಾಟಿ |

| | |
|---|---|
| 4. ಹೆಗ್ಗಾಣಿಗ | 8. ಜೈನ |
| 5. ಗೊಲ್ಲ | 9. ಕುಂಬ |
| 6. ಬೇಡ | 10 ಕುಂಬಾರ |
| 7. ಯಾಕುಲ | 11. ಅಗಸ |
| 8. ಪಳ್ಳಿ ಅಥವಾ ತಿಗಳ | 12. ಬೆಸ್ತ |
| 9. ಮಾದಿಗ | 13. ಪದ್ಮಶಾಲಿ |
| | 14. ನಾಯಿಂದ |
| | 15. ಉಪ್ಪಾರ |
| | 16. ಚಿತ್ರ ಗಾರ |
| | 17. ಗೊಲ್ಲ |
| | 18. ಹೊಲೆಯ.೨ |

ಈ ಪಟ್ಟಿಯನ್ನು ನೀಡುತ್ತಾರೆ. ಪ್ರಾ ನ್ಸಿಸ್ ಬುಕಾನನ್ ಎಂಬುವವನು ತನ್ನ Journey through Madras from Mysore. Malabar and canara ಗ್ರ ಂಥದಲ್ಲಿಯೂ ಸಹ ಎಡಗೈ ಮತ್ತು ಬಲಗೈ ಪಂಗಡಗಳ ಬಗ್ಗೆ ಪ್ರ ಸ್ತಾಪಿಸುತ್ತಾನೆ. ತನ್ನ ಕ್ಷೇತ್ರ ಕಾರ್ಯದ ಸಂದರ್ಭ ಸಂಗ್ರ ಹಿಸಿದ ಮಾಹಿತಿಗಳ ಪ್ರ ಕಾರ ಇದೊಂದು ಪ್ರ ತಿಷ್ಠೆಯ ವಿಚಾರವಾಗಿ ಎರಡೂ ಕೋಮಿನಲ್ಲಿ ಬೇರೂರಿದ್ದು ಅವುಗಳಿಂದಾದ ಅನಾಹುತಗಳ ಬಗ್ಗೆ ಪ್ರ ಸ್ತಾಪಿಸುತ್ತಾನೆ. ಕರ್ನಲ್ ಕ್ಲೋಸ್‌ರವರು ಸಂಗ್ರ ಹಿಸಿರುವ ಮಾಹಿತಿಗೂ ಬುಕಾನನ್ ಸಂಗ್ರ ಹಿಸಿರುವ ಪಟ್ಟಿಗೂ ಸ್ವಲ್ಪ ವ್ಯತ್ಯಾಸವಿದೆ. ಶ್ರೀ ೀರಂಗಪಟ್ಟಣದ ಬಗ್ಗೆ ಹೇಳುವಾಗ ಈ ವಿಷಯವನ್ನು ಪ್ರ ಸ್ತಾಪಿಸುತ್ತಾನೆ. ತಾನೂ ಸಹ ಈ ಪಣಕಟ್ಟಿನ ಪಟ್ಟಿಯನ್ನು ನೀಡುತ್ತಾನೆ. ಮತ್ತು ಮುಸಲ್ಮಾನರ ಭಾಷೆಯಲ್ಲಿ ಮತ್ತು ಬೆಂಗಳೂರಿನಲ್ಲಿ ಸಂಗ್ರ ಹಿಸಿದ್ದಾನೆ. ಹೊಲೆಯರನ್ನು ಮದ್ರಾ ಸಿನಲ್ಲಿ 'ಪರೆಯ'ರೆಂದು ಕರೆಯುತ್ತಾರೆ. ಮತ್ತು ಬಲಗೈಯವರೆಂದು ಕೀಳಾಗಿ ಕಾಣುತ್ತಾರೆ. ಅವರುಗಳಲ್ಲಿ ಕೆಲವೊಂದು ಒಣಪ್ರ ತಿಷ್ಠೆಗಳು ಕಾಣಿಸಿಕೊಳ್ಳುತ್ತದೆ. ಮದುವೆಗಳು ನಡೆಯುವಾಗ 12 ಕಂಬದ ಚಪ್ಪರ ತಮ್ಮ ಹಕ್ಕೆಂದು ಭಾವಿಸುತ್ತಾರೆ. ಎಡಗೈಯವರು ಮದುವೆಯ ಸಂದರ್ಭದಲ್ಲಿ ವರನಿಗೆ ಕುದುರೆ ಸವಾರಿಮಾಡುವ, ಹನುಮಂತನ ಚಿತ್ರ ವಿರುವ ಧ್ವಜ ಒಯ್ಯುವ ಅಧಿಕಾರವಿಲ್ಲ ಎನ್ನುತ್ತಾರೆ.

"ಎಡಗೈಯವರು ಈ ಎಲ್ಲಾ ಗೌರವಗಳು ನಮಗೆ ಕಾಳಿಯಿಂದ ಬಂದಿರುವುದೆಂದೂ, ಕಾಳಿಯು ಎಡಗೈಮೇಲೆ ಇರಿಸಿಕೊಂಡಿದ್ದರಿಂದ ತಾವೇ ಶ್ರೇ ೀಷ್ಠರೆಂದೂ ಹೇಳಿಕೊಳ್ಳುತ್ತಾರೆ. ಇವು ಗೌರವದ ಸಂಗತಿಗಳಾಗಿದ್ದು ಇಂಥ ಮಹತ್ವದ ಸಂಗತಿಗಳಿಂದಾಗಿ ಪರಸ್ಪರ ಬೈದಾಟ, ಜಗಳಗಳಾಗುತ್ತದೆ. ಪ್ರ ತೀಪಕ್ಷದ ಮುಖಂಡರೂ, ಅಜ್ಞಾನಿಗಳೂ, ತಮ್ಮ ಪಕ್ಷದ ಕೆಳಜಾತಿಯವರನ್ನು ಹಿಂಸಾಕೃತ್ಯಗಳಿಗೆ ಪ್ರ ಚೋದಿಸಿ, ಅಂಗಡಿ ಮನೆಗಳನ್ನು ಲೂಟಿಮಾಡಿಸುತ್ತಾರೆ. ಶ್ರೀ ೀರಂಗಪಟ್ಟಣದಲ್ಲಿ ನಡೆದ ಒಂದು ಮದುವೆ ಚಪ್ಪರದ ಪ್ರ ಕರಣದಲ್ಲಿ ದೊಂಬಿಯಾಗಿ ಸೇನೆಯು ಕೆಲವರನ್ನು ಕೊಂದ ವಿವರವೂ ಇದೆ. ಇಂಥ ಪ್ರ ತಿಷ್ಟೆಯ ಪ್ರ ಸಂಗಗಳಿಗೆ ಬಲಗೈಯವರಾದ ಕೋಮಟಿಗರೇ ಕಾರಣರಾಗಿದ್ದು ಬಣಜಿಗಳು

ಮತ್ತು ಕೋಮಟಿಗಳ ನಡುವೆ ನಡೆದ ಈ ಮೇಲು ಕೀಳುಗಳ ಕಿತ್ತಾಟ ಸರಕಾರಕ್ಕೆ ತಲೆನೋವಾಗಿ ಪರಣಮಿಸಿದೆ".10 ಎಂದು ಬರೆದಿದ್ದಾನೆ.

ಬುಕಾನನ್ ಕೂಡ ಈ ನಾಡಿನುದ್ದಕ್ಕೂ ಸಂಚರಿಸಿ ಅಂದಿನ ಸಮಾಜದಲ್ಲಿ ಏರ್ಪಟ್ಟಿರುವ ವ್ಯವಸ್ಥೆಗಳನ್ನು ಸೂಕ್ಷ್ಮವಾಗಿ ಸಂಗ್ರಹಿಸಿ ದಾಖಲು ಮಾಡುತ್ತಾನೆ. ಅವನ ಪ್ರಕಾರದಲ್ಲಿಯೂ ಸಹ ಎಡಗೈ–ಬಲಗೈ ಎಂಬುದು ಕೇವಲ ಒಂದು ಜಾತಿಯೊಳಗಷ್ಟೇ ಆಗಿರದೆ ಇದ್ದುದು ಸ್ಪಷ್ಟವಾಗುತ್ತದೆ. ಅದರ ಪ್ರಕಾರ ಸಿ.ಹಯವದನ್‌ರಾವ್ ಅವರು ಮೈಸೂರು ಗೆಜೆಟಿಯರ್‌ನಲ್ಲಿ ನೀಡುರುವಂತಹ ಎಡಗೈನ 9–ಜಾತಿಗಳ ಮತ್ತು ಬಲಗೈನ 18 ಜಾತಿಗಳ ಗುಂಪುಗಳ ಪಟ್ಟಿಯನ್ನು ಮಾನ್ಯ ಮಾಡುತ್ತಾನೆ. ಇವುಗಳೆಲ್ಲವೂ ವೃತ್ತಿಯನ್ನಾಧರಿಸಿಯೇ ಎಡಗೈ ಬಲಗಳಾಗಿದ್ದು. ಪಣಕಟ್ಟು ಎಂಬ ಪದದಲ್ಲಿ ವಿಭಾಗಗೊಳ್ಳುತ್ತವೆಯಾದರೂ ಅಲ್ಲಿಯೂ ಸಹ ಹೊಲೆಯ–ಮಾದಿಗರು ಮಾತ್ರ ಬಲ–ಎಡಗೈನವರು ಎಂದು ವಿಭಾಗಿಸಿದಂತಿಲ್ಲ. ಒಂದೊಂದರಲ್ಲೂ ಹಲವಾರು ಜಾತಿಗಳು ಕಾಣಿಸಿಕೊಂಡಿವೆ. ಆದರೆ ಅವಾವುವೂ ಇಂದಿಗೆ ಹಿಂದಿನ ಸ್ಥಿತಿಯಲ್ಲಿರದೆ ಈ ಪದಪ್ರತಿಷ್ಠೆಯು ಹೊಲೆಯ–ಮಾದಿಗರಲ್ಲಿ ಮಾತ್ರ ಬೆರೆತುಹೋಗಿವೆ.

1.ಲಕ್ಷ್ಮೀಪತಿ ಕೋಲಾರ, ಮಾಸ್ತೀಕರ ಸಂಸ್ಕೃತಿ. ಪು.50

2.ರಾಮಯ್ಯ ಕೆ, ಸಿಂದ್‌ಮಾದಿಗರ ಸಂಸ್ಕೃತಿ, ಪು.42,

3.Thurston E. casts &Tribes of southern India-p.315.316.

4. ಮಲೆಯಮಾದೇಶ್ವರ ಭಾಗ 1. ಪಿ.ಕೆ.ಆರ್. ಪು.44.–48.

5. ಸಿ. ಹಯವದನರಾವ್, ಮೈಸೂರು ಗೆಜೆಟಿಯರ್ .ಸಂ.2. ಪು.179

6. ಅದೇ. 179

7. ಅದೇ. 179–180

8. ರಾಮಯ ಕೆ. ಸಿಂದ್ ಮಾದಿಗರು, ಪು.44–45

9. ಸಿ.ಹಯವದನರಾವ್ ರವರು ಮೈಸೂರು ಗೆಜೆಟಿಯರ್ ಸಂ–2 ಪು.179

10. ಶೇಷಗಿರಿರಾವ್.ಎಲ್.ಎಸ್(ಸಂ),ಬೆಂಗಳೂರು ದರ್ಶನ. ಪು.31–32.

**ಪರಾಮರ್ಶನ:**


1. ಲಕ್ಷ್ಮೀಪತಿ ಕೋಲಾರ, ಮಾಸ್ತೀಕರ ಸಂಸ್ಕೃತಿ. ಸಾಹಿತ್ಯ ಅಕಾಡೆಮಿ –1993
2. ಶೇಷಗಿರಿರಾವ್.ಎಲ್.ಎಸ್(ಸಂ),ಬೆಂಗಳೂರು ದರ್ಶನ. –2007
3. ಬುಕಾನನ್ :Journey through Madras from Mysore. Malabar and canara- madras-1807
4. ಸಿ.ಹಯವದನರಾವ್, ಮೈಸೂರು ಗೆಜೆಟಿಯರ್ .ಸಂ.2.ಪು.179
5. ಮಲೆಯಮಾದೇಶ್ವರ ಭಾಗ 1. ಪಿ.ಕೆ.ರಾಜಶೇಖರ. ಕು.ಕ.ಅ.ಸಂ. 1973

6. ರಾಮಯ ಕೆ. ಸಿಂದ್ ಮಾದಿಗರು, **ಸಾ**ಹಿತ್ಯ ಅಕಾಡೆಮಿ 1993
7. ಎಡ್ಗರ್ ಥರ್ಸ್ಟನ್ cast & Tribes in southern India, madras-1909

ಡಾ.ರಾಜೇಶ ಜೆ,
ಸಹ ಪ್ರಾಧ್ಯಪಕರು, ಕನ್ನಡ ವಿಭಾಗ
ವಿಶ್ವೇಶ್ವರಪು ಕಲಾ ಮತ್ತು ವಾಣಿಜ್ಯ ಸಂಜೆ ಪದವಿ ಕಾಲೇಜು.
ಬೆಂಗಳೂರು–04